5

# ನಂಬಿಕೆಯ ಆಯ್ಕೆ (1:16-18)

ಜರ್ಮನಿಯ ಜನರಿಗೆ 1983ನೇಯ ಇಸ್ವಿಯ ವಿಶೇಷವಾದ ವರ್ಷವಾಗಿತ್ತು. ಆ ದಿವಸಗಳಲ್ಲಿ ಎರಡು ವಿಧವಾದ ತತ್ವಗಳನ್ನು ಹೊಂದಿದಂತ ಪ್ರಾಮುಖ್ಯವಾದ ಇತಿಹಾಸಕಾರರ ಜನ್ಮದಿನದ ಆಚರಣೆಯಾಗಿರುತ್ತದೆ. ಮಾರ್ಟಿನ್ ಲೂಥರನ 500ನೇಯ ಹುಟ್ಟುಹಬ್ಬ ಹಾಗೂ ಕಾರ್ಲ್‌ಮಾರ್ಕ್ಸ್‌ನ 100ನೇಯ ಹುಟ್ಟುಹಬ್ಬದ ನೆನಪಿನ ಆಚರಣೆಯಾಗಿತ್ತು. ಮಾರ್ಕ್ಸ್‌ನು ಸಮಾಜಶಾಸ್ತ್ರದ ಪಿತಾಮಹ ಅವನ ಈ ತತ್ವವು ಮನುಷ್ಯನ ಆತ್ಮವನ್ನು ಬಂಧನಕ್ಕೆ ನಡೆಸಿತು (ಅನೇಕ ಸಾರಿ ದೇಹವು ಸಹ) ಲೂಥರನು ಸುಧಾರಣೆಯ ಚಳುವಳಿಯ ನಾಯಕನಾಗಿದ್ದು ಮಧ್ಯಯುಗದ ಕ್ಯಾಥೋಲಿಸಂನಿಂದ ಧಾರ್ಮಿಕ ಸ್ವಾತಂತ್ರ್ಯಕ್ಕೆ ನಡೆಸಿದನು.

ನಮ್ಮ ಪ್ರಪಂಚದಲ್ಲಿ, ಎರಡು ವಿಧವಾದಂತ ತತ್ವಗಳು ಕಾರ್ಯಚರಣೆ ಮಾಡುತ್ತಿವೆ. ಕತ್ತಲೆಗೆ ಅರಸನಾದ ಸೈತಾನನ ಶಕ್ತಿಯು ಜನರನ್ನು ಪಾಪದ ಬಂಧನಕ್ಕೆ ನಡೆಸುತ್ತದೆ. ಆದರೆ ಕರ್ತನಾದಂತ ಯೇಸುವಿನ ರಕ್ತವು ಮನುಷ್ಯನನ್ನು ಪಾಪದಿಂದ ಬಿಡುಗಡೆ ಮಾಡುತ್ತದೆ. ಒಂದು ತತ್ವವು ಮನುಷ್ಯನನ್ನು ವಿನಾಶಕ್ಕೆ ನಡೆಸುತ್ತದೆ, ಇನ್ನೊಂದು ತತ್ವವು ಮನುಷ್ಯನನ್ನು ರಕ್ಷಿಸುತ್ತದೆ.

ಈ ಎರಡು ಸ್ವಾರ್ಥಾತ್ಮಕ ತತ್ವಗಳಲ್ಲಿ ಮನುಷ್ಯನು ಯಾವುದನ್ನು ಆಯ್ಕೆ ಮಾಡಿಕೊಳ್ಳ ಬೇಕು ಎಂಬಂತ ನಿರ್ಧಾರದ ಕುರಿತಾಗಿ ಯಾಕೋಬನು ತಿಳಿದಿದ್ದನು. ಪ್ರೇರಣೆಯ ಮೂಲಕ ಯಾವುದು ಉತ್ತಮವಾದದ್ದು ಎಂದು ತಿಳಿದಿದ್ದನು. ನಾವುಗಳು ನಂಬಿಕೆಯ ಆಯ್ಕೆಯನ್ನೆ ಮಾಡಬೇಕೆಂಬ ನಿರ್ಧಾರವನ್ನು ನಿರ್ಣಯಿಸಬೇಕೆಂದು ಸೂಚನೆಯನ್ನು ನೀಡಿದ್ದಾನೆ.

## ವಂಚನೆಯನ್ನು ಎದುರಿಸುವ ಆಯ್ಕೆ (1:16)

ನಾವು ವಂಚನೆಗೆ ಒಳಗಾದಂತ ನಿರ್ಣಯವನ್ನು ಮಾಡಬೇಕೆಂದು ಯಾಕೋಬನು ಸಹಾಯಿಸುತ್ತಾನೆ (1:16). ತಕ್ಷಣದ ನಮ್ಮ ಪ್ರಶ್ನೆ, “ನಾವು ಯಾವ ಮೋಸಕ್ಕೆ ಒಳಗಾಗಿದ್ದೇವೆ?” ಹಿಂದಿನ ಎರಡು ವಚನಗಳಿಂದ ಬಾಹಿರವಾದ ಸಂಕಷ್ಟಗಳ ಕುರಿತು ಎರಡು ಉದ್ದೇಶಗಳ ಪಟ್ಟಿ ಮಾಡಬಹುದು (1:2-4) ಮತ್ತು ಆಂತರಿಕವಾದ ಶೋಧನೆ (1:13-15). ಇಲ್ಲಿ ಯಾಕೋ ಬನು ತಾನು ಮುಂದೆ ಹೇಳಲಿಚ್ಛಿಸುವಂತ ಅಂಶವನ್ನು ತಿಳಿಸುವವನಾಗಿದ್ದಾನೆ. ಮೋಸಕ್ಕೆ ಒಳಗಾಗುವಂತ ವಿಷಯವು ಎಚ್ಚರಿಕೆಗೆ ಗುರುತರವಾದ ಅಂಶದ ಮುನ್ನುಡಿಯಾಗಿರುತ್ತದೆ (1 ಕೊರಿಂಥ 6:9, 10; ಗಲಾತ್ಯ 6:7, 8).

ಅದರಲ್ಲಿರುವ ಒಂದು ಗುರುತರವಾದ ಅಂಶವೇನೆಂದರೆ “ಪ್ರೀಯ ಸಹೋದರರೇ” ವಂಚನೆಗೆ ಒಳಗಾಗದಂತೆ ಎಚ್ಚರವಾಗಿರಿ. ಇತರರಿಗಿಂತಲೂ ವಿಶ್ವಾಸಿಗಳನ್ನು ಸೈತಾನನು ಮೋಸಪಡಿಸುವವನಾಗಿದ್ದಾನೆ. ಕ್ರೈಸ್ತರು ತಪ್ಪಾದ ನಿರ್ಧಾರಗಳನ್ನು ಮಾಡುವವದಾದರೆ - ಅವರು ಮೋಸಕ್ಕೆ ಒಳಗಾಗುತ್ತಾರೆ.

## ದೇವರ ಕೃಪಾಕಾರ್ಯದ ಅರಿವಿನ ಆಯ್ಕೆ (1:17)

ಸೈತಾನನು ತಂದೊಡ್ಡುವ ಶೋಧನೆಗಳನ್ನು ನಂಬಿ, ಮೋಸಕ್ಕೆ ಒಳಗಾಗುವದರ ಮುಖಾಂತರ ನಮಗೆ ಒಳ್ಳೆಯ ಸಂಗತಿಗಳು ಜರುಗುತ್ತವೆ ಎಂದು ತಿಳಿಯಬಾರದು ಯಾಕೆಂದರೆ, “ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳು ಮೇಲಣಿಂದ ಸಕಲ ವಿಧವಾದ

ಬೆಳಕಿಗೂ ಮೂಲಕಾರಣನಾದವನಿಂದ ಇಳಿದು ಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ ಅಥವಾ ವ್ಯತ್ಯಾಸದ ಸೂಚನೆಯೂ ಇಲ್ಲ'' (1:17) ಈಗಾಗಲೇ ಯಾಕೋಬನು ಈ ಅಂಶವನ್ನು ತಿಳಿಸಿರುತ್ತಾನೆ. ದೇವರು ಯಾವಾಗಲೂ ಒಳ್ಳೇದನ್ನೆ ನೀಡುವದರಿಂದ, ವಚನ 13ರಲ್ಲಿ ಇರುವಂತೆ ದೇವರು ಕೆಟ್ಟದ್ದಕ್ಕೇನು ಸಂಬಂಧಪಟ್ಟವನಲ್ಲ ಆತನು ಯಾರನ್ನು ಪಾಪಕ್ಕೆ ಪ್ರೇರೆಪಿಸುವದಿಲ್ಲ. ದೇವರು ಸಾತ್ವಿಕತೆಯನ್ನು, ಮತ್ತು ಸಹಾಯವನ್ನು ಮಾತ್ರ ಮಾಡುತ್ತಾನೆ.

ಮನುಷ್ಯನು ಯಾವಾಗಲೂ ತಾನು ಏನು ಮಾಡಬಹುದು ಎಂಬುದನ್ನು ತುಂಬಿಕೊಂಡಿದ್ದು, ದೇವರಿಂದ ದೂರವಾಗುವದಕ್ಕೆ ಪ್ರಯತ್ನಿಸುತ್ತಾನೆ. ಅವನು ಅನೇಕ ಮೈಲುಗಳ ದೂರವನ್ನು ಕ್ರಮಿಸಿ ಟೆಕ್ಸಾಸ್ ಪ್ರಾಂತ್ಯದಲ್ಲಿರುವ ಟೇಲರನ; ಗುಲಾಬಿಯ ತೋಟವನ್ನು, ಟೆಕ್ಸಾಸ್ ಪ್ರಾಂತದ ನೀಲಿ ಬೆಟ್ಟಗಳನ್ನು ಮಸ್ಕೋಗಿಯ ಅಜಲಿಯಗಳನ್ನು ಓಕ್ಲೋಹೋಮವನ್ನು ಅಥವಾ ಓಜಾರಕ್ ಪರ್ವತವನ್ನು ನೋಡಬಹುದು; ಆದರೆ ಅಲ್ಲಿರುವಂತ ಎಲೆಗಳಾಗಲಿ ಹೂಗಳಾಗಲಿ ದೇವರಿಲ್ಲದೆ ಉಂಟಾಗಲಿಲ್ಲ ಎಂಬುದನ್ನು ಅವನು ತಿಳಿಯುವದಿಲ್ಲ.

ಕೆಲವರು ಈ ವಾಕ್ಯ ಭಾಗವನ್ನು ''ಒಳ್ಳೆಯ'' ವರದಾನಗಳಿಗೂ ಮತ್ತು ''ಪರಿಪೂರ್ಣವಾದ ವರದಾನಗಳಿಗೂ'' ಹೋಲಿಸಬಹುದು. ಮನುಷ್ಯರು ಹಂಚಿಕೊಳ್ಳ ಬಹುದಾದ ಒಳ್ಳೇಯ ದಾನಗಳು (ಆಹಾರ, ಗಾಳಿ, ನೀರು, ಮುಂತಾದವು.), ಎಂಬುದಾಗಿರುತ್ತದೆ. ಮತ್ತು ''ಪರಿಪೂರ್ಣವಾದ ವರದಾನಗಳು'' ಕ್ರಿಸ್ತನಲ್ಲಿರುವವರಿಗಾಗಿ ನೀಡಲಾಗಿರುವ ಆಶೀರ್ವಾ ದಗಳಾಗಿವೆ. ''ಒಳ್ಳೆಯ ವರದಾನಗಳ'' ಕುರಿತು ಈ ವ್ಯತ್ಯಾಸಗಳು ಸತ್ಯವಾಗಿರುವದರಿಂದ ಯಾಕೋಬನು ತಿಳಿಸಿದ್ದಕ್ಕಿಂತಲೂ ಈ ಅಂಶವು ವ್ಯತ್ಯಾಸವುಳ್ಳದ್ದಾಗಿರುತ್ತದೆ. ಶೋಧನೆಗೆ ನಾವು ಒಳಗಾಗುವುದು ದೇವರ ಸ್ವಭಾವಕ್ಕೆ ಬಹಿಷ್ಕಾರವಾಗಿರುವದು ಎಂದು ಯಾಕೋಬನು ತಿಳಿಸುತ್ತಾನೆ (1:13, 17). ನಂತರ ದೇವರು ಮಾತ್ರ ಎಲ್ಲಾ ಒಳ್ಳೇ ದಾನಗಳನ್ನು ಕುಂದಿಲ್ಲದ ಎಲ್ಲಾ ವರಗಳನ್ನು ನೀಡುತ್ತಾನೆ (1:17). ದೇವರು ನಮ್ಮನ್ನು ಮುಗ್ಗರಿಸುವದಕ್ಕೆ ಬಿಡುವದಿಲ್ಲ, ಒಂದು ದಿವಸ ನಮ್ಮನ್ನು ಆಶೀರ್ವದಿಸಿ ಮತ್ತು ಮರು ದಿವಸ ಶೋಧನೆಗೆ ಒಳಪಡಿಸುವದಿಲ್ಲ, ''ಆತನಲ್ಲಿ ಯಾವ ವ್ಯತ್ಯಾಸದ ಸೂಚನೆಗಳಿರುವದಿಲ್ಲ'' (1:17; NIV) ದೇವರು ನಮಗೆ ಪರಿಪೂರ್ಣವಾ ದದ್ದನ್ನು ಒಳ್ಳೇದನ್ನು ಯಾವಾಗಲೂ ಅನುಗ್ರಹಿಸುತ್ತಾನೆ. ಈ ವಿಷಯಗಳು ನಮ್ಮ ಮನಸ್ಸಿನಲ್ಲಿ ಮುದ್ರಿತವಾಗಬೇಕು. ನಾವು ದೇವರನ್ನು ಆಯ್ಕೆ ಮಾಡಿಕೊಂಡಿದ್ದರೆ, ಉತ್ತಮವಾದದ್ದನ್ನೇ ಆಯ್ಕೆ ಮಾಡಿಕೊಂಡಿದ್ದೇವೆ.

## ದೇವರ ಕೃಪೆಯನ್ನು ಜ್ಞಾಪಕ ಮಾಡಿಕೊಳ್ಳುವ ಆಯ್ಕೆ (1:18)

ಇಲ್ಲಿ ದಾಖಲಾಗಿರುವ ಅಂಶವನ್ನು ಮುಂದುವರಿಸುವ ಸಲುವಾಗಿ, ದೇವರು ಮಾಡಿರುವಂಥದ್ದನ್ನು ಯಾಕೋಬನು ಈಗಾಗಲೇ ತಿಳಿಸಿದ್ದಾನೆ. ದೇವರು ಮಾಡಿರುವದನ್ನು ಅವರು ಜ್ಞಾಪಕ ಮಾಡಿಕೊಳ್ಳುವಾಗ, ಅವರು ನಂಬಿಕೆಯನ್ನೆ ಸುಲಭವಾಗಿ ಆಯ್ಕೆ ಮಾಡಿಕೊಳ್ಳುವ ಸಂದರ್ಭವು ಉಂಟಾಗುತ್ತದೆ ಎಂದು ಯಾಕೋಬನು ಕಾರಣ ನೀಡುತ್ತಾನೆ.

ವಿಧೇಯರಾದ ವಿಶ್ವಾಸಿಗಳಿಗಾಗಿ, ದೇವರ ಮೂರು ಕ್ರಿಯೆಗಳನ್ನು ಯಾಕೋಬನು ತಿಳಿಸುತ್ತಾನೆ (1:18).

ಮೊದಲನೆಯದಾಗಿ, ''ಅವನು ಆರಿಸಿಕೊಂಡನು'' (NIV) - KJVಯನ್ನು ಒತ್ತಿ ಹೇಳಲಾಗಿದೆ, ''ತನ್ನ ಸುಚಿತ್ತದ ಪ್ರಕಾರ'' ದೇವರು ತನ್ನ ಮನಸ್ಸನ್ನು ಮಾಡಿದ್ದಾನೆ, ಎಲ್ಲಾ ಕ್ರಿ,ಯೆಗಳು ಸಿದ್ಧವಾದ ನಂತರ, ಮನುಷ್ಯನ ರಕ್ಷಣೆಯ ಕಾರ್ಯವನ್ನು ಪ್ರಾರಂಭಿಸಿದನು (ಗಲಾತ್ಯ 4:4, 5). ಎಲ್ಲಾ ಮನುಷ್ಯರಿಗೂ ರಕ್ಷಣೆಯನ್ನು ನೀಡುವುದು ದೇವರ ಉದ್ದೇಶವಾ ಗಿದೆ (ಎಫೆಸ 1:4, 5; 1 ಯೋಹಾನ 2:2; ಮತ್ತಾಯ 11:28). ದೇವರು ಮನುಷ್ಯರಿಗೆ ರಕ್ಷಣೆಯನ್ನು ನೀಡುವಂಥ ಮನಸ್ಸನ್ನು ಮಾಡಿದ್ದರಿಂದ, ಮನುಷ್ಯರು ರಕ್ಷಣೆಯನ್ನು ಹೊಂದಲು

ಒತ್ತಾಯಿಸಿದನು,

ಎರಡನೆಯದಾಗಿ, "ಆತನು ಸತ್ಯ ಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿದೆ." ಇಲ್ಲಿ ಯಾಕೋಬನು "ಪುನರ್ಜನ್ಮದ" ಕುರಿತು ಮಾತನಾಡುತ್ತಿರುವನು (ಯೋಹಾನ 3:5; ತೀತ 3:5). ಇಲ್ಲಿ ಹಳೆಯ ಮನುಷ್ಯನು ಪಾಪದ ಶಾಪಕ್ಕೆ ಯೇಸುವಿನ ಮರಣದಲ್ಲಿ (ಹೂಣಲ್ಪಟ್ಟು) ಮತ್ತು ಹೊಸ ಮನುಷ್ಯನಾಗಿ ಎದ್ದು ಬರುತ್ತಾನೆ (ರೋಮಾಪುರ 6:4). "ವಾಕ್ಯದಸತ್ಯವು" ನಮ್ಮನ್ನು ಮುನ್ನಡಿಸಿ, ಬೋಧಿಸಿ, ಈ ಹೊಸ ಹುಟ್ಟುವಿಕೆಗೆ ನಡಿಸುತ್ತದೆ. "ವಿಲಿಯಮ್ ಬಾರ್ಕ್ಲೆ ಸರಳವಾಗಿ ಇದನ್ನು "ವಾಕ್ಯದ ಸತ್ಯವೇ ಸುವಾರ್ತೆಯಾಗಿದೆ; ..." ಎಂದಿದ್ದಾರೆ. ಈ ಹೇಳಿಕೆಯು, ಗ್ರಂಥಗಳಲ್ಲಿ ಹೇಳಿರುವ ವಿಷಯಗಳಿಗೆ ಸಮನಾಗಿದೆ (ರೋಮಾಪುರ 1:16; ಯಾಕೋಬ 1:21; 1 ಪೇತ್ರ 1:23).

ಮೂರನೆಯದಾಗಿ, "ನಾವು ಆತನ ಸೃಷ್ಠಿಗಳಲ್ಲಿ ಪ್ರಥಮ ಫಲವಾಗುವದಕ್ಕೆ" ಆತನು ಇದನ್ನೆಲ್ಲಾ ಮಾಡಿದನು. ಮೊದಲ ಎರಡು ಅಂಶಗಳು ಮೂರನೆಯದನ್ನು ತೋರಿಸುತ್ತವೆ. ಕ್ರೈಸ್ತನು ಒಂದು ವಿಧವಾದ "ಪ್ರಥಮ ಫಲವಾಗಿದ್ದಾನೆ." ಪಸ್ಕ ಹಬ್ಬದ ಸಮಯದಲ್ಲಿ ಪ್ರಥಮ ಫಲವನ್ನು ಸಮರ್ಪಿಸುತ್ತಿದ್ದರು (ಯಾಜಕಕಾಂಡ 23:10; ಧರ್ಮೋಪದೇಶಕಾಂಡ 26:2) ಯಾಕಂದರೆ ಅವು ಅತಿ ಉತ್ತಮವಾಗಿದ್ದವು. ಹಳೇ ಒಡಂಬಡಿಕೆಯ ಕಲ್ಪನೆಯನ್ನು ಹೊಸ ಒಡಂಬಡಿಕೆಗೆ ವರ್ಗಾಹಿಸಲಾಗಿದೆ, ಅದರ ಅರ್ಥವನ್ನೂ ಯಾವಾಗಲೂ ಉಪಯೋಗಿ ಸಲಾಗಿದೆ (1 ಕೊರಿಂಥ 15:20; 16:15; ಪ್ರಕಟನೆ 14:4). ಇದರಲ್ಲಿರುವ ಭಾವನೆಯನ್ನೆ ಯಾಕೋಬನ ಪತ್ರಿಕೆಯಲ್ಲಿ ಉಪಯೋಗಿಸಲಾಗಿ ಅದರಲ್ಲಿ ಎರಡು ಅರ್ಥಗಳನ್ನು ತಿಳಿಯಲಾಗಿದೆ. ಕ್ರೈಸ್ತನು ದೇವರ ಸೃಷ್ಠಿಯಲ್ಲಿ ಅತಿ ಉತ್ತಮ ಎಂಬುದು ಮೊದಲನೆಯ ಅರ್ಥ. ಅವನು ಪ್ರಥಮ ಫಲ ಎಂಬುದು ಎರಡನೆಯದು.

## ಮುಕ್ತಾಯ

ಸೈತಾನನಿಂದ ಶೋಧನೆಗೆ ಒಳಪಟ್ಟಾಗ, ದೇವರು ಈಗಾಗಲೇ ಮಾಡಿರುವದನ್ನು ಜ್ಞಾಪಕಮಾಡಿಕೊಳ್ಳಿರಿ. ನಾವು ಹೊಸದಾಗಿ ಹುಟ್ಟುವದಕ್ಕಾಗಿ, "ಆಯ್ಕೆ" ಗೊಂಡಿದ್ದೇವೆ. ಇದರಿಂದ "ಪುನರ್ಜನ್ಮ" ನಾಮ್ಮ ಸೃಷ್ಟಿಯ ಪ್ರಥಮ ಫಲವಾಗಿದ್ದೇವೆ.

---

ಟಿಪ್ಪಣಿ

[1]William Barclay, *The Letters of James and Peter* (Philadelphia, Pa.: Westminster Press, 1960), 63.